**ರಂಗ:** ನನ್ ಹೆಂಡ್ತಿಗೆ ಯಾವಾಗಲೂ ತುಂಬಾ ಸಿಟ್ಟು ಕಣಯ್ಯ. ಏನಾದರೂ ಒಂದು ಮಾತು ಹೇಳಿದ್ರೆ ಸಾಕು, ಜಗಳಾನೇ ಶುರು ಮಾಡಿಬಿಡ್ತಾಳೆ.
**ಸಿಂಗ:** ನಿನ್ನದು ಎಷ್ಟೋ ವಾಸಿ. ನನ್ನ ಹೆಂಡ್ತಿ ಕಿಕ್ ಸ್ಟಾರ್ಟ್ ರೀತಿಯಲ್ಲ, ಸ್ವಯಂಚಾಲಿತ ಸೆಲ್ಫ್ ಸ್ಟಾರ್ಟ್ ರೀತಿ. ತನಗೆ ತಾನೇ 'ಆನ್' ಆಗಿ ಜಗಳ ಶುರು ಹಚ್ಕೊಂಡು ಬಿಡ್ತಾಳೆ ಕಣಯ್ಯಾ.

**ಮೀನಾಕ್ಷಿ:** ಇಂದಿನ ಪೇಪರ್ ನೋಡ್ರಿ, ಮೆಜೆಸ್ಟಿಕ್ ಮಾಲ್‌ನಲ್ಲಿ ಗ್ರ್ಯಾಂಡ್ ಎಕ್ಸ್‌ಚೇಂಜ್ ಆಫರ್! ಹಳೆಯದನ್ನು ಕೊಟ್ಟು ಹೊಸದನ್ನು ಪಡೆಯಿರಿ' ಅಂತ ದೊಡ್ಡದಾಗಿ ಜಾಹೀರಾತು ಕೊಟ್ಟಿದ್ದಾರೆ.
**ಲೇಪಾಕ್ಷಿ:** ಹೌದಾ? ಹಾಗಾದ್ರೆ, ಈಗಲೇ ಹೋಗೋಣ.
**ಮೀನಾಕ್ಷಿ:** ಯಾರ ಜೊತೆ ಹೋಗೋದು?
**ಲೇಪಾಕ್ಷಿ:** ಇನ್ಯಾರ ಜೊತೆ... ನನ್ನ ಗಂಡ ಇಲ್ವಾ. ಆಫೀಸ್‌ಗೆ ಅರ್ಧ ದಿನ ರಜೆ ಹಾಕಿ, ಈಗ್ಲೆ ಮನೆಗೆ ಬರೋಕೆ ಹೇಳ್ತೀನಿ.
**ಮೀನಾಕ್ಷಿ:** ಮುಖ್ಯವಾದ ಸಭೆ ಏನಾದ್ರೂ ಇದ್ರೆ ಅವರಿಗೆ...
**ಲೇಪಾಕ್ಷಿ:** ಹೆಂಡತಿಗೆ ಶಾಪಿಂಗ್ ಮಾಡಿಸುವುದಕ್ಕಿಂತ ಮುಖ್ಯವಾದದ್ದು ಏನಿದೆ ಅವರಿಗೆ!

***

**ಪಶು ಕಂ ಫ್ಯಾಮಿಲಿ ಡಾಕ್ಟರ್:** ಎಡಗೈಯಲ್ಲಿರುವ ಮಾತ್ರೆಯನ್ನು ನಿಮ್ಮ ನಾಯಿಗೆ ಕೊಡಿ. ಬಲಗೈಯಲ್ಲಿರುವ ಮಾತ್ರೆಯನ್ನು ನಿಮ್ಮ ಹೆಂಡತಿಗೆ ಕೊಡಿ. ಆದರೆ ತುಂಬಾ ಜೋಪಾನ.
**ಮಂಜ:** ಯಾವ್ದಕ್ಕೂ ಎರಡೂ ಕೈಯಲ್ಲಿರುವ ಮಾತ್ರೆಗಳ ಕವರ್ ಮೇಲೆ ಹೆಸರು ಬರೆದು ಬಿಡಿ. ಏನಾದ್ರೂ ಹೆಚ್ಚು ಕಮ್ಮಿ ಆಗಿ, ಮಾತ್ರೆಗಳು ಅದಲು ಬದಲಾಗಿ ನಾಯಿ ನುಂಗಿ ಸತ್ತರೆ ತುಂಬಾ ಕಷ್ಟ ಆಗಿ ಬಿಡುತ್ತೆ ಡಾಕ್ಟ್ರೆ.

***

ಮಂಜಣ್ಣ ಬರೆದ 'ಶಬ್ದಕೋಶ' ಎಂಬ ಪುಸ್ತಕಕ್ಕೆ ಪ್ರಶಸ್ತಿ ಬಂದಿತು. ಅವರಿಗೆ ಸನ್ಮಾನವನ್ನೂ ಮಾಡಿದರು.
**ಅಧ್ಯಕ್ಷರು:** ಮಂಜಣ್ಣ ಅವರೇ... ನಿಮ್ಮ ಶಬ್ದಕೋಶದ ಪುಸ್ತಕ ಬಹಳ ಚೆನ್ನಾಗಿದೆ. ಅಷ್ಟೊಂದು ಪದಗಳನ್ನು ಹೇಗೆ ಸಂಗ್ರಹ ಮಾಡಿದ್ರಿ? ಈ ಬಗ್ಗೆ ನಮ್ಮ ಸಭಿಕರೊಂದಿಗೆ ನಿಮ್ಮ ಅನುಭವ ಹಂಚಿಕೊಳ್ಳಿ.
**ಮಂಜಣ್ಣ:** ಅಯ್ಯೋ... ಅದೇನೂ ಸಾಧನೆಯಲ್ಲ ಬಿಡಿ, ನನ್ನ ಹೆಂಡತಿ ತುಂಬ ವಾಚಾಳಿ. ಮಾತಿಗೆ ಮಾತು ಸೇರಿಗೆ ಸವ್ವಾಸೇರು ಎನ್ನುವವಳು. ಪ್ರತಿ ದಿನ ಅವಳು ನನ್ನ ಹತ್ರ ಆಡಿದ ಪದಗಳ ಸಂಗ್ರಹವಷ್ಟೇ ಈ ಶಬ್ದಕೋಶ.

***

**ಭಿಕ್ಷುಕ:** ಒಂದು ವಾರದಿಂದ ಏನೂ ತಿಂದಿಲ್ಲ. ಏನಾದ್ರೂ ಸಹಾಯ ಮಾಡಿ ಸ್ವಾಮಿ.
ಪಾಂಡು: ನಿನ್ನ ನೋಡಿದ್ರೆ ಅಯ್ಯೋ ಅನ್ಸುತ್ತೆ! ತಗೋ ಈ ₹10. ಏನಾದ್ರೂ ತಿನ್ನೋಗು.
ಸ್ವಲ್ಪ ಹೊತ್ತಿನ ನಂತರ ಪಾಂಡು ಬಾರ್‌ಗೆ ಹೋದ. ಪಾಂಡು ಸಹಾಯ ಮಾಡಿದ್ದ ಭಿಕ್ಷುಕ ಸಹ ಅದೇ ಬಾರಿನಲ್ಲಿ ಭರ್ಜರಿಯಾಗಿ ಎಣ್ಣೆ ಹೊಡೀತಿದ್ದ.
**ಪಾಂಡು:** (ಏರು ಧ್ವನಿಯಲ್ಲಿ) ಬಡವಾ, ರಾಸ್ಕಲ್... ಏನೋ ಪಾಪ ಅಂತ ದುಡ್ಡು ಕೊಟ್ಟರೆ ಇಲ್ಲಿ ಬಂದು ಮಜಾ ಮಾಡ್ತಾ ಇದೀಯಾ?
**ಭಿಕ್ಷುಕ:** ಅಯ್ಯೋ ಬಿಡಿ ಸ್ವಾಮಿ... ಕೋಪ ಮಾಡ್ಕೋಬೇಡಿ. ನನ್ನತ್ರ ಎಣ್ಣೆಗೆ ದುಡ್ಡಿತ್ತು. ಆದ್ರೆ ಸೈಡ್ಸ್‌ಗೆ ದುಡ್ಡು ಶಾರ್ಟೇಜ್ ಇತ್ತು. ಅದ್ಕೆ ನಿಮ್ಮತ್ರ ಭಿಕ್ಷೆ ಬೇಡಿದ್ದು. ಪರವಾಗಿಲ್ಲ ಬನ್ನಿ, ನೀವೂ ಒಂದೆರಡು ಪೆಗ್ ತಗೊಳ್ಳಿ.

***




ಹೋಟೆಲ್‌ನಲ್ಲಿ ಬಿಸಿಬೇಳೆ ಬಾತ್ ತಿಂದು ಬಿಲ್ ಪಾವತಿ ಮಾಡುವ ಮುನ್ನ ಹೋಟೆಲ್ ಮಾಲೀಕನಿಗೆ ಹೇಳಿದ್ದು ಹೀಗೆ...
**ರಾಯರು:** ನೋಡಿ ನಂದೇ ತಪ್ಪು ಬಿಡಿ. ನಿಮ್ಮ ಹೋಟೆಲ್‌ನ ಬಿಸಿಬೇಳೆ ಬಾತ್ ತುಂಬಾನೇ ಚೆನ್ನಾಗಿತ್ತು! ಬಿಸಿ ಬಿಸಿ ಆಗಿಯೂ ಇತ್ತು. ಆದ್ರೂ ನಂದೇ ತಪ್ಪು ಬಿಡಿ.
**ಮಾಲೀಕ:** ಅಯ್ಯೋ ರಾಯರೆ, ಯಾಕ್ ಹೀಗೆ ಹೇಳ್ತಿದ್ದೀರಿ. ಅಂಥದ್ದೇನಾಯ್ತು?
**ರಾಯರು:** ಬಿಸಿಬೇಳೆ ಬಾತ್ ಅನ್ನ, ನಿನ್ನೆ ಬೆಳಿಗ್ಗೆನೇ ಬಂದು ತಿನ್ನಬೇಕಾಗಿತ್ತು. ನಂದೇ ತಪ್ಪು ಬಿಡಿ.

***

(ಸಂಕ್ರ ಮತ್ತು ಮಂಕ್ರ ಜೈಲಿನ ಒಳಗೆ ಮಾತಾಡಿಕೊಳ್ತಿದ್ರು)
**ಸಂಕ್ರ:** ನಿನ್ನ ಯಾಕೆ ಜೈಲಿಗೆ ಹಾಕಿದ್ದಾರೆ?
**ಮಂಕ್ರ:** ಒಂದು ಸಾವಿರ ರೂಪಾಯಿ ಸಾಲ ತಗೊಂಡಿದ್ದಕ್ಕೆ!
**ಸಂಕ್ರ:** ಬರೀ ಸಾಲ ತಗೊಂಡ್ರೆ ಜೈಲಿಗೆ ಹಾಕ್ತಾರಾ? ಇದು ತುಂಬಾ ಅನ್ಯಾಯ.
**ಮಂಕ್ರ:** ಹೌದು, ನಾನು ಆ ಸಾಹುಕಾರರನ್ನ ಸಾಲ ಕೇಳಿದ್ದೆ. ಅವನು ಕೊಡಲಿಲ್ಲ. ಅದಕ್ಕೆ ಹಾರೆ ತಕ್ಕೊಂಡು ಅವ್ನ ತಲೆ ಮೇಲೆ ಹೊಡೆದೆ. ಅಷ್ಟಕ್ಕೆ ಅವ್ನು ಸತ್ತೋದ.

***

(ಸಿಂಗ ಹೋಟೆಲ್‌ನಲ್ಲಿ ಸರ್ವರ್ ತಂದಿಟ್ಟ ಉದ್ದಿನ ವಡೆ ಮೇಲೆ ಒಂದು ಮ್ಯಾಗ್ನೆಟ್ ಇಟ್ಟು ಪರೀಕ್ಷೆ ಮಾಡ್ತಿದ್ದ)
**ಸರ್ವರ್:** ಏನ್ ಸಾರ್ ಇದು? ಮ್ಯಾಗ್ನೆಟ್ ಹಿಡ್ಕೊಂಡು ಏನ್ ಪರೀಕ್ಷೆ ಮಾಡ್ತಿದ್ದೀರಿ?
**ಸಿಂಗ:** ವಡೆ ನಿನ್ನೆಯದ್ದೋ ಇಂದಿನದ್ದೋ ಅನ್ನೋದನ್ನ ಈ ಮ್ಯಾಗ್ನೆಟ್ ಕಂಡು ಹಿಡಿಯುತ್ತೆ.
**ಸರ್ವರ್:** ಹೌದಾ? ಅದು ಹೇಗೆ?
**ಸಿಂಗ:** ಹಳೆಯ ವಡೆ ಆಗಿದ್ರೆ ಚಕ್ ಅಂಥ ಮ್ಯಾಗ್ನೆಟ್‌ಗೆ ಅಂಟಿಕೊಳ್ಳುತ್ತೆ. ಸೋ... ನೀನು ಕೊಟ್ಟ ಈ ವಡೆ ನಿನ್ನೆಯದ್ದು.

***

**ಕರಿಯ:** ಎರಡು ಹೊತ್ತು ಊಟ ತಿಂಡಿ ಕೊಟ್ರೆ ಸಾಯೋವರೆಗೂ ನಿಮ್ ಮನೆ ಕೆಲಸ ಮಾಡಿಕೊಂಡು ಬಿದ್ದಿರ್ತೀನಿ ಸಾರ್!
**ಯಜಮಾನ:** ಎಲ್ರೂ ಮೊದ್ಲು ಹೀಗೇ ಹೇಳೋದು. ಒಂದೆರಡು ವಾರ ಇದ್ದು ಆಮೇಲೆ ಓಡಿ ಹೋಗ್ತಾರೆ.
**ಕರಿಯ:** ಇಲ್ಲಾ ಸಾರ್ ಹಾಗೆಲ್ಲಾ ಖಂಡಿತಾ ಮಾಡೋದಿಲ್ಲ. ಯಾಕಂದ್ರೆ ನಂಗೆ 9 ವರ್ಷ ಒಂದೇ ಕಡೆ ಕೆಲಸ ಮಾಡಿದ ಅನುಭವ ಇದೆ!
**ಯಜಮಾನ:** ಭೇಷ್ ಕಣಯ್ಯಾ. 9 ವರ್ಷ ಎಲ್ಲಿ ಕೆಲಸ ಮಾಡಿದ್ದೆ?
**ಕರಿಯ:** ಇಲ್ಲೇ, ಪರಪ್ಪನ ಅಗ್ರಹಾರ ಜೈಲಿನಲ್ಲಿ!

***

**ಶೀನ:** ನಿನ್ನ ಇವತ್ತು ಮೆಜೆಸ್ಟಿಕ್‌ನಿಂದ ಕಂಗೇರಿಗೆ ಟಿಕೆಟ್ ಇಲ್ದೆ ಕರ್ಕೊಂಡು ಹೋಗ್ತೀನಿ ಬರ್ತೀಯಾ?
**ವೆಂಕ:** ಸಾಧ್ಯವೇ ಇಲ್ಲ. ಒಂದು ವೇಳೆ ಟಿಕೆಟ್ ಇಲ್ದೆ ಕರ್ಕೊಂಡು ಹೋಗೋಕೆ ನಿನ್ನತ್ರ ಬಸ್ ಪಾಸ್ ಅಥವಾ ರೈಲು ಪಾಸ್ ಇದೆ ಅನ್ಸುತ್ತೆ.
**ಶೀನ:** ಎರಡೂ ಇಲ್ಲ. ನಾನು ನೀನೂ ಮಾತಾಡ್ತಾ ಮಾತಾಡ್ತಾ ನಡೆದರೆ, ಕಂಗೇರಿ ತಲುಪೋದೆ ಗೊತ್ತಾಗೋದಿಲ್ಲ.

(ಮಕ್ಕಳು ಆಟವಾಡ್ತಿದ್ರು)
**ತಾತ:** ಬರೀ ಮನೆ ಆಟ ಆಡ್ತೀವಿ ಅಂತ ಹೇಳಿ, ಈ ಪಾಟಿ ಜಗಳವಾಡ್ತಿದ್ದೀರಾ?
**ಮರಿ ಸೀನ:** ನಾವು ಜಗಳವಾಡ್ತಿಲ್ಲ ತಾತ. ಇದು ನಮ್ಮ ವಠಾರದ ಆಟ. ನಾನು ಅಪ್ಪ, ಇವಳು ಅಮ್ಮ! ಅವಳು ಪಕ್ಕದ ಮನೆ ಆಂಟಿ.

ಸಂಗ್ರಹ: **ಆರ್. ವೀರೇಶ್ ಕುಮಾರ್,**
**ಬೆಂಗಳೂರು**